## ನಕ್ಕುಬಿಡಿ





ಯಂಕ: ಲೈಫ್ ಸಖತ್ ಬೇಜಾರಾಗ್ತಿದೆ ಕಣೊ.
ಮಂಕ: ಯಾಕೋ, ಏನಾಯ್ತೋ?
ಯಂಕ: ಹಾಗೆ ಸುಮ್ನೆ ಯಾವುದಾದರೂ ಕೆರೆಗೊ... ನದಿಗೊ... ಸಮುದ್ರಕ್ಕೊ... ಹೋಗಿ...
ಮಂಕ: ಹೋಗಿ...?
ಯಂಕ: ಮೀನು ಹಿಡಿಯೋಣಾಂತ!

★★★

ಗುಂಡ: ಹೋದ ವಾರ ತೆಗೆದುಕೊಂಡು ಹೋದ ಪುಸ್ತಕ ಮತ್ತೆ ಕೊಡುತ್ತೀರಾ?
ಲೈಬ್ರೆರಿಯನ್: ಏನ್ ಸಾರ್ ಆ ಪುಸ್ತಕ ಅಷ್ಟೊಂದು ಇಂಟರೆಸ್ಟಿಂಗ್ ಆಗಿದೆಯಾ?
ಗುಂಡ: ಹಾಗೇನಿಲ್ಲ, ಅದರಲ್ಲಿ ನನ್ನ ಗರ್ಲ್‌ಫ್ರೆಂಡ್ ನಂಬರ್ ಬರೆದಿದ್ದೆ!

ಮ್ಯಾನೇಜರ್: ನಮ್ಮ ಬ್ಯಾಂಕಿನಲ್ಲಿ ನಿಮಗೆ ಇಂಟರೆಸ್ಟ್ ಇಲ್ಲದೆ ಲೋನ್ ಕೊಡ್ತಾ ಇದ್ದೇವೆ.
ಮಂಕ: ಕೊಡೋಕೆ ಇಂಟರೆಸ್ಟ್ ಇಲ್ಲಾಂದ್ರೆ ಯಾಕೆ ಕೊಡ್ತೀರಾ? ಬ್ಯಾಡ ಬಿಡಿ.

★★★

ಸಂತಾ: ಈ ಕಾಲೇಜು ಉತ್ತಮವಾಗಿದೆಯೇ?
ಸೆಕ್ಯುರಿಟಿ: ನಿಜಕ್ಕೂ ಉತ್ತಮವಾಗಿದೆ. ನಾನು ಇಲ್ಲಿಯೇ ಎಂ.ಬಿ.ಎ. ಮಾಡಿದ್ದು... ಇಲ್ಲಿಯೇ ಕೆಲ್ಸಾನೂ ಸಿಕ್ತು!

★★★

ಹೆಂಡತಿ: ರೀ... ಸ್ವಲ್ಪ ಎದ್ದೇಳಿ ಬೇಗ.
ಗಂಡ: ಏನೇ ಅದು... ಈ ಎರಡು ಗಂಟೆ ರಾತ್ರಿಲಿ ಯಾಕೆ ಎಬ್ಬಿಸ್ತಾ ಇದ್ದೀಯಾ?
ಹೆಂಡತಿ: ಮಲಗೋಕೆ ಮೊದಲು ನೀವು ನಿದ್ರೆ ಮಾತ್ರೆ ತೆಗೆದುಕೊಳ್ಳೋದು ಮರೆತು ಬಿಟ್ರಿ.

ಹೆಂಡತಿ: (ಫೋನ್ ಮಾಡಿ) ರೀ ಎಲ್ಲಿದ್ದೀರಿ. ಇವತ್ತು ನನ್ನ ಹುಟ್ಟಿದದಿನ. ಮನೆಗೆ ಬರುತ್ತಾ ಗಿಫ್ಟ್ ತನ್ನಿ.
ಗಂಡ: ತಗೋ... ಗಿಫ್ಟ್ ತರೋದಕ್ಕೆ ಹೇಳಿದ್ದಲ್ಲ. ಚಿನ್ನದ ನೆಕ್ಲೇಸ್ ತಂದಿದ್ದೀನಿ. ಈಗ ಖುಷಿನಾ?
ಹೆಂಡತಿ: ಅಯ್ಯೋ ಬರೀ ನೆಕ್ಲೇಸ್ ಹಾ! ಹೊಸ ಕಾರು ತರುತ್ತಾರೆ ಅಂತ ಅಂದುಕೊಂಡಿದ್ದೆ.
ಗಂಡ: ಅಯ್ಯೋ ಹುಚ್ಚಿ! ಕಾರು ಡೂಪ್ಲಿಕೇಟ್ ಸಿಗಲ್ಲ!

★★★

ಗುಂಡ: ನಾಯಿ ಕಚ್ಚಿದರೆ ಏನು ಮಾಡ್ತೀರಾ?
ಡಾಕ್ಟರ್: ಇಂಜೆಕ್ಷನ್ ಕೊಡುತ್ತೇನೆ.
ಗುಂಡ: ಹಲ್ಲಿಲ್ಲದ ನಾಯಿ ಕಚ್ಚಿದರೆ?
ಡಾಕ್ಟರ್: ಸೂಜಿಯಿಲ್ಲದ ಸಿರಿಂಜ್‌ನಿಂದ ಇಂಜೆಕ್ಷನ್ ಕೊಡುತ್ತೇನೆ. ಮುಗ್ತಾಳ ಗೆಟ್ ಔಟ್.

(ಸಂಗ್ರಹ) **ಜಿ.ಬಸವರಾಜಪ್ಪ**, ಮೈಸೂರು

ಗುಂಡ: ನಾಳೆ ಶಾಲೆಯಲ್ಲಿ ವಾರ್ಷಿಕೋತ್ಸವದ ನಿಮಿತ್ತ ಅತಿಥಿಯಾಗಿ ನನ್ನನ್ನು ಆಹ್ವಾನಿಸಿದ್ದಾರೆ. ಸಣ್ಣದೊಂದು ಭಾಷಣ ಹೇಳಿಕೊಡಯ್ಯ..
ಪುಂಡ: ನನಗೂ ಬರಲ್ಲ ಕಣಯ್ಯಾ, ಇಂತಹ ಸಂದರ್ಭಗಳಲ್ಲಿ ನಾನು ನನ್ನ ಶ್ರೀಮತಿಯ ಬಳಿ ಒಂದೆರಡು ಮಾತುಗಳನ್ನಾಡುತ್ತೇನೆ. ನಂತರ ಅವಳು ಆ ಬಗ್ಗೆ ಒಂದು ಭಾಷಣವನ್ನೇ ಬಿಗಿಯುತ್ತಾಳೆ. ಮತ್ತದನ್ನು ಕಂಠಪಾಠ ಮಾಡಿ ಕಾರ್ಯಕ್ರಮದಲ್ಲಿ ಉದುರಿಸುತ್ತೇನೆ.

★★★

ಪುಂಡ: ಈ ಬಾರಿ ದೀಪಾವಳಿ ಹೇಗೆ ಆಚರಿಸಿದೆ?
ಗುಂಡ: ಏನೆಂತ ಹೇಳಲಿ... ನ್ಯಾಯಾಲಯ ಪಟಾಕಿಗೆ ತಡೆಹಾಕಿದೆ. ಸರ್ಕಾರ ಶರಾಬಿಗೆ ತಡೆಹಾಕಿದೆ. ಸಿಹಿತಿಂಡಿಗಳಿಗೆ ವೈದ್ಯರು ತಡೆಹಾಕಿದ್ದಾರೆ. ಕೇವಲ ಅನುಲೋಮ ವಿಲೋಮ ಮಾಡುತ್ತಾ ಹಬ್ಬ ಆಚರಿಸಬೇಕಾಯಿತು ಮಾರಾಯ!

★★★

ಟೀಚರ್: ಸ್ಟೇಷನ್ ಮಾಸ್ಟರ್ ಹಾಗೂ ಸ್ಕೂಲ್ ಮಾಸ್ಟರ್‌ಗೆ ಇರುವ ವ್ಯತ್ಯಾಸವೇನು?
ಗುಂಡ: ಸ್ಟೇಷನ್ ಮಾಸ್ಟರ್ ಟ್ರೈನ್‌ಗಳತ್ತ ಚಿತ್ತ ಹರಿಸುತ್ತಾರೆ. ಸ್ಕೂಲ್ ಮಾಸ್ಟರ್ ಎಳೆ ಚಿತ್ತಗಳನ್ನು ಟ್ರೈನ್ ಮಾಡುತ್ತಾರೆ!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್**, ಮುಂಬೈ


